ಕೂತು ನಮ್ಮೂರರು ಗುಡ್ಡಬೆಟ್ಟದ ಸಂದಿಗುಂದಿ ನುಗ್ಗಿ, ಸೇತುವೆ ದಾಟಿ, ಶೇಷನಾಗನ ಹೆಡೆ ಮೇಲೆ ಓಡಾಡತಿದ್ದ ಶ್ರೀಕ್ರಿಷ್ಣ ಪರಮಾತ್ಮನ ರೀತೀಲಿ ಹೊರಗಡೆ ಪ್ರಪಂಚವ ಕಣ್ಣುಬಿಟ್ಟು ನೋಡತಿದ್ದಂಗೆ ನಮ್ಮೂರನಲ್ಲಿ ತಿರುಗಾಟ ಹೆಚ್ಚಾಯ್ತು. ಎಲ್ಲ ಥಳುಕು ಬಳುಕು ಶುರುವಾಯ್ತು. ಮೊದ್ಲು, ಕತ್ತಲಾದ ಮೇಲೆ ಈ ಕಾಡಿಗೆ ಬರೋಕೆ ಹೆದ್ರವ್ರು ಜನ... ಹಂಗಿತ್ತು.

ಸಂಜೆ ಮುಂದೆ ನಮ್ಮೂರ ದಿಬ್ಬದ ಮೇಲೆ ನಿಂತ್ಕಂಡು ನೋಡುದ್ರೆ ಒಳ್ಳೆ ಸೀರೆ ಮಡಿಕೆ ಹಾಕದಂಗೆ ಸಣ್ಣ ಸಣ್ಣ ಗುಡ್ಡಗಳು ಕಾಣಸಕಳವು ಹಸುರಿಗೆ. ಮಧ್ಯದಲ್ಲಿರೋ ಮನೆ ಹೆಂಚಗಳ ಸಂದೀಲಿ ಹೊಗೆ ಸುರುಳಿ ಬಿಟ್ಕಂಡು ಮೇಲೇಳತಿರದು. ದನಗಳು ಮನೆ ಕಡೆಗೆ ಮೇಯಕಂದೆ ಹೋಗತಿರವು. ಕುರಿಮರಿ ಗಿಡಕ್ಕೆ ಏರಕಂಡು ಸೊಪ್ಪು ಪರಿತಿರವು. ಸೂರ್ಯ ಮುಳುಗುವಾಗ ಹೆಂಗಿರದು ಅಂತೀರಾ? ಹೆಬ್ಬಾಳದ ಕೆರೆ ದೊಡ್ಡದು ನೋಡಿ. ನಡು ಮಧ್ಯದಲ್ಲಿ ಒಂದು ಗುಡ್ಡೆ ಇತ್ತು. ಸೂರಕ್ಕಿ, ಬೆಳ್ಳಕ್ಕಿ, ಮಾರುದ್ದ ಕೊಕ್ಕಿನ ಕೊಕ್ಕರೆ ಎಲ್ಲ ಮರಿ ಮಾಡೋವು ಅಲ್ಲೇಯಾ... ನಮ್ಮೂರರು ಮೀನುಗಾಳ ಹಾಕಕ್ಕೆ ಹೋದಾಗ ನಾನೂ ಹೋಗುವೆ, ಜೊತೇಲಿ. ಆಗ ನೋಡಿದೀನಿ, ಅಯ್ಯೋ! ಸಾಯಂಕಾಲ ಆದ್ರೆ ಸಾಕು. ನಮ್ಮ ಮಾತು ನಮಗೇ ಕೇಳದಂಗೆ... ಕಿವಿ ಕಿತ್ತೋಗ ಹಂಗೆ... ನಡುಗಡ್ಡೆಲಿ ಹಾರಾಟ ತೂರಾಟ ಮಾಡವು ಅಲ್ಲಿ. ಕ್ರ್ಯಾ... ಕ್ರಾ ಅನಕಂಡು! ಗೂಡು ಸೇರೋ ಹೊತ್ತಲ್ವಾ? ನಮ್ಮೂರ ದಿಬ್ಬದ ಮೇಲಿಂದಲೂ ಆ ನೀರು ಕಾಣಸದು... ನೋಡಬೇಕು ಅಲ್ಲಿ. ಸೀತಾಫಳ ಹಣ್ಣು ಮಸ್ತು. ಆ ಗುಡ್ಡೆಗೆ ಈಜಕಂಡು ಹೋಗೋರು ಕುಯ್ದು ತರೋರು ಅನ್ನಿ.

ನಮ್ಮೂರು ಗುಡ್ಡೆ ಮೇಲೆ ನಿಂತ್ರೆ ಅಲ್ಲಿ ಹಕ್ಕಿಸಾಲು ಸಾರಿಹೋಗತಿರವು. ಆ ಚಂದವ ನೋಡಬೇಕಾಗಿತ್ತು ನೀವು ಗೀತಾವ್ರೆ. ಆಕಾಶ ಅನ್ನೋ ಆಕಾಶಾನೆ ಥರಂತರ ಹಕ್ಕಿಯ ಸರಮಾಲೆ ಹಾಕ್ಕಂಡಿದ್ದೆ, ಕೆಂಪು ಕುಂಕುಮ ಇಟ್ಕಂಡು ಲಕಲಕನೆ ಕೆಂಪಾದಂಗೆ ಓಕಳಿ ನೀರ ಚೆಲ್ಕಂಡಿರದು ಮೈಮೇಲೆ, ಹಂಗೇ ಅದನ್ನ ನೋಡಕಂಡು ಬೆರಗಾಗಿ ಗುಳುಕಾಗುಳಕ್ಕನೆ ನೀರಲ್ಲಿ ಮುಳುಗಿ ಹೋಗೇಬಿಡನು ಸೂರ್ಯ, ಅವನು ಮುಳುಗದ ನೋಡದೆ ಒಂದು ಚಂದ. ಆ ಬಣ್ಣದ ಬೆರಗಿನ ಸುತ್ತ ತಿರುಗಿ ನೋಡುದ್ರೆ, ತಣ್ಣಗಿರೊ ಹಸಿರು ಹಾಸು ಕಾಣಸದು, ಅದನ್ನ ನೋಡತಾ ನೋಡತಾ ಇರೋವಾಗಲೇ ನಮ್ಮಪ್ಪ ಅಮ್ಮ ಹುಲ್ಲು ಹೊರೆ ಹೊತ್ತು, ದನಕರ ಎಳ್ಕಂಡು ಬರೋದು ದೂರದಲ್ಲಿ ಕಾಣಸದು, ಅವರ ಜೊತೆ ಹಂಗೇ ಹೋಗಿ ಮನೆ ಸೇರಕೋತಿದ್ವಿ. ಸೌದೆ ಸೊಪ್ಪು ತಗಂಡು ಕುರಿಮರಿ ಎಳ್ಕಂಡು ದೀಪ ಹಚ್ಚ ಹೊತ್ಗೆ ಮನೆಗೆ ಹೋಗಬಿಡತಿದ್ವಿ ಅನ್ನಿ. ನಮ್ಮಜ್ಜಿ ಬುಡ್ಡಿ ಗಾಜು ವರೆಸಿ ದೀಪ ಹಚ್ಚಿರೋದೊ. ಅಮೇಲೆ ನಮ್ಮಮ್ಮನು ಬಿಸಿ ಅಡಿಗೆ ಮಾಡದು. ನಮ್ಮಣ್ಣಯ್ಯನೂ ನಾನೂ ಒಂದೇ ತಟ್ಟೇಲಿ ಕುಂತು ಉಂಡು ಮಲಗಬಿಡತಿದ್ವಿ. ಸೀಮೆಣ್ಣೆ ಮುಗ್ದೋಗುತ್ತೆ ಅಂತ ನಮ್ಮುತ್ತಮ್ಮ ಬೇಗ ಮಲಕಳದಿದ್ರೆ ಬಯ್ಯದು...

ಆಗ ಅವ್ರಿಗೆ ಬೆಳಿಗಿಂದ ಸಂಜೆವರ್ಗೂ ಬಯಲಲ್ಲಿ ಕೆಲ್ಸ ಮಾಡಿದ್ದೇ ಗೊತ್ತಾಗ್ತಿರ್ನಿಲ್ಲ... ನಮಗೆ ಈಗ ಬರಿ ಇಷ್ಟಗಲ ಮನೆ ಕೆಲಸ ಮಾಡಕಳದು ಕಷ್ಟ ನೋಡಿ. ಹೆಂಗಾಗಿದೀವಿ? ಬಿ.ಪಿ. ಶುಗರ್ರು ಎರಡೂ ಬಂದುಬಿಡತು, ಇನ್ನೂ ಐವತ್ತು ವರ್ಷ ನಂಗೆ. ನಮ್ಮಪ್ಪಂಗೆ ಈಗ 67 ವರುಷ... ನೀವು ನಂಬಲ್ಲ ಗೀತಾವ್ರೇ... ನಮ್ಮಪ್ಪ ಈಗಲೂ ಭಾನುವಾರ ದಿಸ ಮಧ್ಯಾನ ಮರಿಮಾಂಸದ ಸಾರು, ಒಂದು ಮುದ್ದೆ ಹಿಟ್ಟು ಉಂಡು ಹೋಗಿದ್ದೆ ತಣ್ಣಗೆ ಅರಳಿಕಟ್ಟೇಲಿ ಮಲಗ್ಬಿಡತ್ತೆ. ಚರ್ಬಿ ಮಾಂಸ ತಿಂದು ಒಂದು ದಪ್ಪ ಮುದ್ದೆ ಊಟ ಮಾಡಿ ಅರಗಿಸ್ಕಂತರೇಳಿ ಇವತ್ತಿಗೂವೆ, ಆವತ್ತಿಂದ ಕಷ್ಟವಾನಿ ಜೀವಗಳಲ್ಲವ್ರ?'

'ಹಾಗಾದ್ರೆ ನಿಮ್ಮ ಆಸ್ತಿಮನೆ? ನಿಮ್ಮನೇವ್ರು ಏನ್ ಮಾಡತಾರೆ?' ಗೀತಾಳ ಮಾತಿಗೆ ಪದ್ಮ ಬೇಸರದಲ್ಲಿ ಹೇಳಿದಳು.

'ನಮಗೆ ಒಬ್ಬನೇ ಅಣ್ಣನು ಚಂದ್ರಣ್ಣ, ನಮ್ಮೂರಲ್ಲಿ ಈಗಲೂ ಅವನು ಒಳ್ಳೆ ಹೆಸರು ಇಟ್ಕಂಡಿದನೆ. ದೇವ್ರು ಎತ್ತೋ ಕಾರ್ಯದಿಂದ ಭೂಮಿ ವಿಚಾರದವರ್ಗೂ ನಮ್ಮವರೆಲ್ಲ ನಮ್ಮಣ್ಣಯ್ಯನ ಹತ್ರಕ್ಕೆ ಬರ್ತಾರೆ. ನಮ್ಮಣ್ಣಯ್ಯನೋರು ಬುದ್ಧಿವಂತರು, 74ನೆ ಇಸವೀಲಿ ಇರ್ಬೇಕು. ಈ ಮಾವಿನಮರದ ಗದ್ದೆ ಬಿ.ಡಿ.ಎ ವಹಿಸ್ಕಂಬಿಡ್ತು. ಅಮೇಲೆ ನಮ್ಮಣ್ಣ ಹುಷಾರಾಗ್ಬಿಟ್ಟು. ನಮ್ಮಜ್ಜಿನ ಕಳ್ಸಿ, ಡಿ.ಸಿ. ಕಾಲಿಗೆ ಬೀಳ್ಸಿ, ಗೊಲ್ಲಹಳ್ಳಿಲಿ ಇದ್ದ ಐದಾರು ಎಕ್ರೆ ಜಮೀನು ಉಳಸ್ಕಂಡ್ರು. ಸೈಟ್ ಮಾಡಿ ಚೂರು ಚೂರೇ ಮಾರಾಟ ಮಾಡಿ ನಮ್ಮಗಳ ಮದ್ವೇನೂ ಮಾಡಿದ್ರು. ಅವ್ರು ದೊಡ್ಡ ದೊಡ್ಡ ಬಿಲ್ಡಿಂಗ್